# ಬಂಟ್ವಾಳ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ

**ಸಿ.ಸಿ. ನಂ. 988/2022**

**ಪ್ರಾಸಾ ಃ 9**

**ಚಾಸಾ ಃ 20**

**ಹೆಸರು** ಃ **ಕೊರಗಪ್ಪ ನ್ಯಾಕ್**

**ತಂದೆಯ ಹೆಸರು** ಃ **ವೆಂಕಪ್ಪ ನ್ಯಾಕ್**

**ಪ್ರಾಯ** : **61 ವರ್ಷ**

**ಉದ್ಯೋಗ** ಃ ನಿವೃತ್ತ ಪಿ **ಎಸ್ಐ,**

**ವಾಸಸ್ಥಳ** ಃ ಪುತ್ತೂರು

---

**ದಿನಾಂಕ: 01.08.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

---

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ನಾನು ನವೆಂಬರ್ **2019** ರಿಂದ ಜನವರಿ **2023** ರ ವರೆಗೆ ಬಂಟ್ವಾಳ ಸಂಚಾರ ಠಾಣೆಯಲ್ಲಿ ಪಿ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

**2. ದಿಃ 08.06.2022** ರಂದು ಬೆಳಗ್ಗೆ **8.30** ಗಂಟೆಗೆ ಮಂಗಳೂರು ಪಾದರ್ ಮುಲ್ಲರ್ ಆಸ್ಪತ್ರೆಯಿಂದ ಬಂದ ನೌಶದ ಎಂಬುವವರ ಮರಣದ ಸೂಚನಾ ಪತ್ರವನ್ನು ಪಡೆದುಕೊಂಡು, ಕಲಂ **304**(ಎ) ಪ್ರಕರಣದಲ್ಲಿ ಅವಳವಡಿಸಿಕೊಂಡು ತನಿಖೆಯನ್ನು ನಡೆಸಲು ಅನುಮತಿ ಕೋರಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ನಿವೇದನೆಯನ್ನು ನಿಪಿ**–31** ಎಂದು, ಸೂಚನಾ

ಪತ್ರವನ್ನು ನಿಪಿ-**32** ಎಂದು**,** ಸಾಕ್ಷಿಯ ಸಹಿಗಳನ್ನು ನಿಪಿ-**31(**ಎ**)** ಮತ್ತು ನಿಪಿ-**32** **(**ಎ**)** ಎಂದು ಗುರುತಿಸಲಾಯಿತು**.**

**3.** ದಿ**. 08.06.2022** ರಂದು ಮಂಗಳೂರು ಪಾದರ್ ಮುಲ್ಲರ್ ಆಸ್ಪತ್ರೆಗೆ ಬೇಟಿ ಕೊಟ್ಟು ನೌಶದ್ ಮೃತ ದೇಹದ ಮೇಲೆ ಪಂಚರ ಸಮಕ್ಷಮ ನಿಪಿ-**24** ರಂತೆ ಶವ ತನಿಖಾ ವರದಿಯನ್ನು ಜರುಗಿಸಿರುತ್ತೇನೆ**.** ನಂತರ ಅಪಘಾತ ಸ್ಥಳಕ್ಕೆ ತೆರಳಿ ಚಾಸಾ-**4** ರವರು ಹಾಜರಿದ್ದು ಸ್ಥಳವನ್ನು ತೋರಿಸಿಕೊಟ್ಟಂತೆ ಅಪಘಾತ ಸ್ಥಳದ ಮಹಜರ ಮತ್ತು ಕರಡು ನಕಾಶೆಯನ್ನು ತಯಾರಿಸಿರುತ್ತೇನೆ**.** ಸಂಜೆ **4.00** ಗಂಟೆಯಿಂದ **5.00** ಗಂಟೆ ವರೆಗೆ ಪಂಚರಾದ ಚಾಸಾ-**5** ಮತ್ತು **6** ರವರ ಸಮಕ್ಷಮ ಕೆಎ-**19**-ಎಸಿ-**1770** ಟೆಂಪೊ ಹಾಗೂ ಕೆಎ-**19**-ಎಮ್ ಬಿ **-6718** ಆಲ್ಟೋ ಕಾರನ್ನು ಸ್ವಾದೀನಪಡಿಸಿಕೊಂಡು ನಿಪಿ- **17** ಮತ್ತು **18** ರಂತೆ ಮಹಜರ ಜರುಗಿಸಿರುತ್ತೇನೆ**.** ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-**17(**ಡಿ**)** ಮತ್ತು ನಿಪಿ-**18(**ಡಿ**)** ಎಂದು ಗುರುತಿಸಲಾಯಿತು. ಅದೇ ದಿನ ಚಾಸಾ-2 ರಿಂದ 4 ರವರ ಹೇಳಿಕೆಯನ್ನು ನಿಪಿ-16, 15, ಮತ್ತು 19 ರಂತೆ ಪಡೆದುಕೊಂಡಿರುತ್ತೇನೆ. ನಿಪಿ-2 ರಿಂದ 9 ರ ಪೋಟೊದಲ್ಲಿ ಕಾಣುವ 2 ವಾಹನಗಳನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ನಂತರ ಕಡತವನ್ನು ಚಾಸಾ-21 ರವರಿಗೆ ಹಸ್ತಾಂತರಿಸಿರುತ್ತೇನೆ.

**<u>ಪಾಟೀ ಸವಾಲುಃ ಆರೋಪಿತರ ಪರಃ</u> ಶ್ರೀ** ಜೆ ಪಿ ಎಸ್ **ವಕೀಲರಿಂದ**

**3.** ಚಾಸಾ-**2** ರಿಂದ **4** ರವರ ಹೇಳಿಕೆಯನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ**.** ಅಪಘಾತ ಸ್ಥಳಕ್ಕೆ ನಾನು ಹೋಗಿಲ್ಲ ಎಂದರೆ ಸರಿಯಲ್ಲ**.** ನಿಪಿ-**17** ಮತ್ತು **18** ನ್ನು ತಯಾರಿಸಿ ಠಾಣೆಯಲ್ಲಿ ಸಾಕ್ಷಿದಾರರ ಸಹಿಯನ್ನು

ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಚಾಸಾ-**1** ರವರ ಮರು ಹೇಳಿಕೆಯನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

ನನ್ನ ಉಕ್ತಲೇಖನಾ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಲಾಗಿ ಕೇಳಿ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ,
ಬಂಟ್ವಾಳ